## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

**ಸಿ.ಸಿ.ನಂ.1733/2025**

ಸಿ.ಡಬ್ಲ್ಯು 02

ಪಿ.ಡಬ್ಲ್ಯು 01

ಸಾಕ್ಷಿದಾರರ ಹೆಸರು - **ಜಟ್ಟಿ ಬಲಿಯಪ್ಪಾನಾಯ್ಕ**

ತಂದೆಯ ಹೆಸರು - ಬಲಿಯಪ್ಪಾನಾಯ್ಕ

ವಯಸ್ಸು - 66 ವರ್ಷ

ಉದ್ಯೋಗ - ರೈತಾಪಿ

ವಾಸ್ತವ್ಯ - ಹೆಬ್ಬೈಲ್

(ಇಂದು ದಿನಾಂಕಃ **29-12-2025** ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ - ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನನಗೆ ಆರೋಪಿತನ ಪರಿಚಯ ಇದೆ. ಪೊಲೀಸರು ನನ್ನನ್ನು ಯಾವುದೇ ದಾಳಿಗೆ ಸಹಕರಿಸುವಂತೆ ಕರೆದಿರುವುದಿಲ್ಲ. ಸುಮಾರು 1 ವರ್ಷದ ಹಿಂದೆ ನಾನು ನನ್ನ ವಯಕ್ತಿಕ ಕೆಲಸಕ್ಕಾಗಿ ರಸ್ತೆಯಲ್ಲಿ ಹೋಗುತ್ತಿರುವಾಗ ನನ್ನನ್ನು ಕರೆದು ದಾಖಲೆ ತೋರಿಸಿ ಸದ್ರಿ ದಾಖಲೆಗೆ ಸಹಿಯನ್ನು ತೆಗೆದುಕೊಂಡಿರುತ್ತಾರೆ ನಂತರ ನನ್ನನ್ನು ಬಲಾತ್ಕಾರವಾಗಿ ಆರೋಪಿತನ ಮನೆಯ ಪಕ್ಕದಲ್ಲಿ ಕರೆದುಕೊಂಡು ಹೋಗಿದ್ದು, ಅಲ್ಲಿ ನನ್ನನ್ನು ನಿಲ್ಲಿಸಿ ಕೆಲವೊಂದು ವಸ್ತುಗಳನ್ನು ಇಟ್ಟುಕೊಂಡು ಭಾವಚಿತ್ರವನ್ನು ತೆಗೆದಿರುತ್ತಾರೆ. ಸದ್ರಿ ವಸ್ತುಗಳ ಕುರಿತಾಗಿ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

**C.W.** 02 **P.W.** 01

ಸಾಕ್ಷಿಗೆ 5 ದಾಖಲಾತಿಗಳನ್ನು ತೋರಿಸಲಾಗಿ, ಅದರಲ್ಲಿ ತಮ್ಮ ಸಹಿ ಇರುವುದಾಗಿ ಒಪ್ಪಿದ್ದು, ಸದರಿ ದಾಖಲಾತಿಗಳು **ಶೋಧನಾ ಸಮುಚ್ಚಿನ ವಾರಂಟ**, **ಪಂಚನಾಮೆ, ಸ್ವತ್ತುಗಳ ಪಟ್ಟಿ ಹಾಗೂ ಮನವಿ ಪತ್ರ ಹಾಗೂ ಮಾದರಿ ಮೊಹರವಾಗಿದ್ದು**, ಅವುಗಳನ್ನು ಕ್ರಮವಾಗಿ **ನಿ.ಪಿ.1 ರಿಂದ 5 ಎಂದು** ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ಕ್ರಮವಾಗಿ **ನಿ.ಪಿ.1(ಎ) ಯಿಂದ 5(ಎ) ಎಂದು** ಗುರುತಿಸಲಾಯಿತು. ನಿಪಿ 1 ರಿಂದ 5 ರಲ್ಲಿ ಪೊಲೀಸರು ನನ್ನ ಬಳಿ ಒತ್ತಾಯದಿಂದ ಸಹಿಯನ್ನು ಪಡೆದುಕೊಂಡಿರುತ್ತಾರೆ ಸದ್ರಿ ದಾಖಲಾತಿಯಲ್ಲಿ ಬರೆದಿರುವ ವಿಷಯ ನನಗೆ ತಿಳಿದಿಲ್ಲ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ, ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 6 ಎಂದು ಗುರುತಿಸಲಾಯಿತು. ನಿಪಿ 6 ರಲ್ಲಿ ತಾನು ಪೊಲೀಸರ ಒತ್ತಾಯದ ಮೇರೆಗೆ ನಿಂತಿರುವುದಾಗಿ ತಿಳಿಸಿರುತ್ತಾರೆ.

ದಾಳಿಯ ಸಂದರ್ಭದಲ್ಲಿ ಮಾಡಿದೆ ಎನ್ನಲಾದ ವಿಡಿಯೋ ಚಿತ್ರೀಕರಣವನ್ನು ಪ್ರದರ್ಶಿಸಲು ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರು ಸಮಯವಕಾಶವನ್ನು ಕೋರಿದ್ದು, ಸಮಯವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಪ್ರ.ದ.ನ್ಯಾ.ದಂ. ಕುಮಟಾ